**<u>2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ</u>**

**<u>ಸತ್ರ ಮೊಕದ್ದಮೆ ಸಂಖ್ಯೆ: 14/2026</u>**

ಪಿ.ಡಬ್ಲುಃ 1 ಸಿಡಬ್ಲುಃ 1

| | | |
|---|---|---|
| ಸಾಕ್ಷಿಯ ಹೆಸರು | : | ಪಂಪಾಪತಿ |
| ತಂದೆಯಹೆಸರು | : | ಹನುಮಂತಪ್ಪ |
| ವಯಸ್ಸು | : | 40 ವರ್ಷ |
| ವೃತ್ತಿ | : | ಅಂಚೆ ಇಲಾಖೆ ನೌಕರ |
| ವಾಸಸ್ಥಳ | : | ಮುಷ್ಟೂರು |

**<u>ಸತ್ಯಪ್ರತಿಜ್ಞೆ ಮಾಡಿದ ದಿನಾಂಕಃ 03.08.2026.</u>**

<u>ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-</u>

1) ನನ್ನ ತಂದೆಗೆ ನಾವು ಮೂರು ಜನ ಮಕ್ಕಳು. ನನಗೆ ಚಾಸಾ-25 ನನ್ನ ತಮ್ಮ. ಮೃತ ಲಕ್ಷ್ಮಿ ಅಲಿಯಾಸ್ ಹೇಮಾವತಿ ನನ್ನ ಸಹೋದರಿ. ನನ್ನ ತಂಗಿಯ ಮದುವೆ ಈಗ ನಾನು ವಿ.ಸಿ ಮೂಲಕ ನೋಡುತ್ತಿರುವ ಆರೋಪಿಯ ಜೊತೆ ಸುಮಾರು 20 ವರ್ಷಗಳ ಹಿಂದೆ ಆಗಿತ್ತು. ನನ್ನ ತಂಗಿಗೆ 3 ಜನ ಮಕ್ಕಳು ಇದ್ದಾರೆ. ಅವರುಗಳು ಗಂಗೋತ್ರಿ, ಪಾಂಡುರಂಗ, ನಾಗೇಶ. ಆರೋಪಿಯ ಮನೆಯಲ್ಲಿ ಚಾಸಾ-13, 14 ಮತ್ತು ನನ್ನ ತಂಗಿ, ಮಕ್ಕಳು ವಾಸವಿದ್ದರು. ನನಗೆ ಚಾಸಾ-17 ಮತ್ತು 18 ರವರ ಪರಿಚಯವಿದೆ. ಅವರು ಕಂಪ್ಲಿಯ ವಾಸಿಗಳಾಗಿದ್ದಾರೆ.

2) ನನ್ನ ತಂಗಿ ಈಗ ಮರಣ ಹೊಂದಿದ್ದಾಳೆ. ಅವಳನ್ನು ಆರೋಪಿಯು ನವಂಬರ್ 2020 ರಲ್ಲಿ ತನ್ನ ಮನೆಯಲ್ಲಿ ಕೊಲೆ ಮಾಡಿದ್ದ. ದಿನಾಂಕ 20.11.2020 ರಂದು ಮಧ್ಯರಾತ್ರಿ ಆರೋಪಿಯ ಮನೆಯ ಪಕ್ಕದವರು ನನಗೆ ಫೋನ್ ಮಾಡಿ ನನ್ನ ತಂಗಿಯ ಕೊಲೆ ಆಗಿರುವ ಸಂಗತಿಯನ್ನು ತಿಳಿಸಿದ್ದರು. ನಂತರ ನಾನು ಚಾಸಾ-9 ಮತ್ತು 10 ಸೇರಿಕೊಂಡು ಆರೋಪಿಯ ಮನೆಗೆ ಹೋದೆವು. ಆರೋಪಿಯ ಮನೆಯ ಒಳ ಅಂಕಣದಲ್ಲಿ ನನ್ನ ತಂಗಿಯ ಶವ ಬಿದ್ದಿತ್ತು. ನನ್ನ ತಂಗಿಯ ತಲೆಯ ಮಧ್ಯ ಭಾಗದಲ್ಲಿ ಮತ್ತು ಎದೆಯ ಮೇಲೆ ಮಚ್ಚಿನ ಏಟು ಬಿದ್ದಿದ್ದು ಕಂಡು ಬಂದಿತ್ತು.

**3)** ನಾನು ಆರೋಪಿಯ ಮನೆಗೆ ಹೋಗಿದ್ದ ಸಮಯದಲ್ಲಿ ಆರೋಪಿಯ ತಾಯಿ ಮತ್ತು ಸಾಕು ತಾಯಿಯಾದ ಚಾಸಾ-13 ಮತ್ತು 14 ರವರು ಇದ್ದರು. ಆರೋಪಿಯು ಮನೆಯಲ್ಲಿ ಇರಲಿಲ್ಲ. ಆ ದಿವಸ ರಾತ್ರಿ ಆರೋಪಿ ಹಾಗು ನನ್ನ ತಂಗಿಯ ನಡುವೆ ಜಗಳ ಆಗಿತ್ತು ಎಂದು ಮತ್ತು ಸದರಿ ಜಗಳ ವಿಕೋಪಕ್ಕೆ ಹೋಗಿ ಆರೋಪಿಯು ಮಚ್ಚಿನಿಂದ ನನ್ನ ತಂಗಿಯ ಮೆಲೆ ಹಲ್ಲೆ ಮಾಡಿ ಕೊಲೆ ಮಾಡಿದ್ದ ಎಂದು ಚಾಸಾ-13 ಮತ್ತು 14 ರವರು ನನಗೆ ತಿಳಿಸಿದ್ದರು. ಚಾಸಾ-13 ಮತ್ತು 14 ರವರು ಜಗಳ ಬಿಡಿಸಲು ಹೋದಾಗ ಆರೋಪಿಯು ಅವರಿಗೂ ಸಹ ಹಲ್ಲೆ ಮಾಡಿದ್ದ ಎಂದು ಅವರು ತಿಳಿಸಿದ್ದರು ಮತ್ತು ಅವರ ಕೈಗಳಿಗೆ ಗಾಯ ಆಗಿದ್ದ ಬಗ್ಗೆ ಸಹ ತಿಳಿಸಿದ್ದರು. ಆರೋಪಿಯು ನಂತರ ಕಾಯಿಪಲ್ಲೆ ರಾಜು ಚಾಸಾ-17 ರವರ ಮೇಲೆಯೂ ಸಹ ಹಲ್ಲೆ ಮಾಡಿದ ಸಂಗತಿ ನನಗೆ ಗೊತ್ತಾಗಿತ್ತು.

**4)** ನಾನು ಪೊಲೀಸರ ಸಹಾಯದಿಂದ ನನ್ನ ತಂಗಿಯ ಮೃತ ದೇಹವನ್ನು ಕಂಪ್ಲಿ ಸರ್ಕಾರಿ ಆಸ್ಪತ್ರೆಗೆ ಸಾಗಿಸಿದ್ದೆ. ನಂತರ ನಾನು ಚಾಸಾ-25 ರವರಿಂದ ದೂರನ್ನು ಬರೆಯಿಸಿ ಪೊಲೀಸರಿಗೆ ನೀಡಿದ್ದೆ. ಸಾಕ್ಷಿ ಗುರುತಿಸಿದ ದೂರನ್ನು ನಿಪಿ-1 ಎಂದು ಚಾಸಾ-1 ರವರ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನನಗೆ ಘಟನೆಯಿಂದ ಗಾಬರಿಯಾಗಿದ್ದರಿಂದ ದೂರನ್ನು ಚಾಸಾ-25 ರವರಿಂದ ಬರೆಸಿಕೊಟ್ಟಿದ್ದೆ. ಅದೇ ದಿವಸ ಪೊಲೀಸರು ಘಟನೆ ಸ್ಥಳಕ್ಕೆ ಬಂದಿದ್ದರು. ನಾನು ಪೊಲೀಸರಿಗೆ ಮತ್ತು ಪಂಚರಿಗೆ ಘಟನೆ ಸ್ಥಳವನ್ನು ತೋರಿಸಿದ್ದೆ. ಸದರಿ ಸ್ಥಳದಲ್ಲಿ ಪೊಲೀಸರು ಪಂಚನಾಮೆಯನ್ನು ಮುಂಜಾನೆ ಮಾಡಿದ್ದರು. ಸದರಿ ಪಂಚನಾಮೆಯನ್ನು ನಿಪಿ-2 ಎಂದು ಹಾಗು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಪಂಚನಾಮೆಯ ಸಮಯದಲ್ಲಿ ನಾನು ಈಗ ನ್ಯಾಯಾಲಯದ ಮುಂದೆ ನೋಡುತ್ತಿರುವ ನೀಲಿ ಬಣ್ಣದ ದಿಂಬು ಹಾಗು ಕೌದಿಯನ್ನು ಪೊಲೀಸರು ಜಪ್ತು ಮಾಡಿಕೊಂಡಿದ್ದರು. ಸಾಕ್ಷಿಯು ಗುರುತಿಸಿದ ದಿಂಬನ್ನು ಮುಮಾ-1 ಎಂದು, ಕೌದಿಯನ್ನು ಮುಮಾ-2 ಎಂದು ಗುರುತಿಸಲಾಯಿತು. ಪಂಚನಾಮೆಯ ಸಮಯದಲ್ಲಿ ರಕ್ತದ ಸ್ವ್ಯಾಪಲನ್ನು ಸಹ ತೆಗೆದುಕೊಂಡಿದ್ದರು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಸ ಅ ರವರು ಪರವಾನಿಗೆ ಕೇಳುತ್ತಾರೆ. ಸ ಅ ರವರ ವಾದವನ್ನು ಕೇಳಿ ಸಾಕ್ಷಿಯ ಹೇಳಿಕೆಯನ್ನು ಹಾಗೂ ಮುಖ್ಯ ವಿಚಾರಣೆಯನ್ನು ಪರಿಶೀಲನೆ ಮಾಡಿ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪರವಾನಿಗೆ ಕೊಡಲಾಯಿತು).

<u>ಪಾಟೀಸವಾಲು ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:</u>

5) ಪೊಲೀಸರು ಆರೋಪಿಯ ಮನೆಯ ಅಡುಗೆ ಕೋಣೆಯ ಬಳಿ ಇದ್ದ ರಕ್ತವನ್ನು ಪಂಚನಾಮೆ ಸಮಯದಲ್ಲಿ ಸಂಗ್ರಹಿಸಿದ್ದರು ಎಂದರೆ ಸರಿ. ನಾನು ಪೊಲೀಸರನ್ನು ಚಾಸಾ-17 ರವರು ಮನೆಗೆ ಕರೆದುಕೊಂಡು ಹೋಗಿದ್ದೆ ಮತ್ತು ಅಲ್ಲಿ ಚಾಸಾ-17 ರವರ ಮನೆಯ ಹಾಲ್ ನಲ್ಲಿ ಚಾಸಾ-17 ರವರಿಗೆ ಆರೋಪಿ ಹಲ್ಲೆ ಮಾಡಿದ ಸ್ಥಳವನ್ನು ತೋರಿಸಿದ್ದೆ ಎಂದರೆ ಸರಿ. ಸದರಿ ಸ್ಥಳದಲ್ಲಿದ್ದ ಮುಮಾ-1 ಮತ್ತು 2 ಅನ್ನು ಪೊಲೀಸರಿಗೆ ತೋರಿಸಿದ್ದೆ ಎಂದರೆ ಸರಿ. ಸದರಿ ಸ್ಥಳದಲ್ಲಿ ಹಾಗು ಆರೋಪಿಯ ಮನೆಯಲ್ಲಿ ಪೊಲೀಸರು ಮುಂಜಾನೆ 11.30 ರಿಂದ ಮಧ್ಯಾಹ್ನ 01.00 ಗಂಟೆಯವರೆಗೆ ನಿಪಿ-2 ರಂತೆ ಪಂಚನಾಮೆಯನ್ನು ಮಾಡಿದ್ದರು ಎಂದರೆ ಸರಿ. ಆರೋಪಿಯು ನನ್ನ ತಂಗಿಯ ಶೀಲದ ಬಗ್ಗೆ ಸಂಶಯ ವ್ಯಕ್ತಪಡಿಸುತ್ತಿದ್ದ ಮತ್ತು ಚಾಸಾ-17 ಈತನಿಗೆ ನನ್ನ ತಂಗಿಯ ಜೊತೆ ಸಂಬಂಧ ಇತ್ತು ಎಂದು ಸಂಶಯ ವ್ಯಕ್ತಪಡಿಸುತ್ತಿದ್ದ ಎಂದರೆ ಸರಿ. ಅದೇ ಕಾರಣದಿಂದಾಗಿ ಆರೋಪಿಯು ನನ್ನ ತಂಗಿಯನ್ನು ಕೊಲೆ ಮಾಡಿದ್ದ ಮತ್ತು ಚಾಸಾ-17 ರವರ ಮೇಲೆಯೂ ಸಹ ಕೊಲೆ ಪ್ರಯತ್ನ ಮಾಡಿದ್ದ ಎಂದರೆ ಸರಿ.

<u>ಪಾಟೀಸವಾಲು ಆರೋಪಿ ಪರವಾಗಿ ಶ್ರೀ ಎನ್.ಬಿ.ಕೆ ವಕೀಲರಿಂದಃ</u>

6) ಆರೋಪಿಯು ಒಳ್ಳೆ ವ್ಯಕ್ತಿ ಎಂದು ನನ್ನ ತಂಗಿಗೆ ಮದುವೆ ಮಾಡಿಕೊಟ್ಟಿದ್ದೆವು ಎಂದರೆ ಸರಿ. ನನ್ನ ತಂಗಿ ಮತ್ತು ಆರೋಪಿಗೆ 3 ಜನ ಮಕ್ಕಳು ಇದ್ದಾರೆ ಎಂದರೆ ಸರಿ. ಅವರುಗಳಿಗೆ ಈಗ 15 ವರ್ಷ, 12 ವರ್ಷ ಮತ್ತು 5 ವರ್ಷ ಎಂದರೆ ಸರಿ. ಅವರುಗಳು ಶಾಲೆಗೆ ಹೋಗುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಮನೆಯಲ್ಲಿ ಈಗ ಚಾಸಾ-13, 14 ಮತ್ತು ಆರೋಪಿಯ ಮಕ್ಕಳು ವಾಸವಿದ್ದಾರೆ ಎಂದರೆ ಸರಿ. ಆರೋಪಿ ತನ್ನ

ಹೆಂಡತಿಯೊಂದಿಗೆ ವ್ಯವಸಾಯ ಮಾಡುತ್ತಿದ್ದ ಎಂದರೆ ಸರಿ. ಆರೋಪಿಯು ವ್ಯವಸಾಯದಿಂದ ಬಂದ ಆದಾಯದಿಂದ ಮನೆ ನಡೆಸಿಕೊಂಡು ಹೋಗುತ್ತಿದ್ದ ಎಂದರೆ ಸರಿ.

7) ಆರೋಪಿಯ ಮನೆಯಲ್ಲಿ ಒಟ್ಟು 3 ಕೋಣೆಗಳು ಇವೆ. ನನ್ನ ತಂಗಿಗೆ ಅವಳ ಮದುವೆಯಾದ ಸ್ವಲ್ಪ ದಿವಸಗಳ ನಂತರ ಅರ್ಧ ಎಕರೆ ಜಮೀನನ್ನು ಕೊಟ್ಟಿದ್ದೆವು ಎಂದರೆ ಸರಿ. ಸದರಿ ಜಮೀನು ನನ್ನ ತಂಗಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ಆರೋಪಿಯು ಸದರಿ ಜಮೀನನ್ನು ತನ್ನ ಹೆಸರಿಗೆ ಮಾಡುವಂತೆ ನನ್ನ ತಂಗಿಯನ್ನು ಬಲವಂತ ಮಾಡುತ್ತಿದ್ದ. ನಾನು ಈಗ ನೋಡುತ್ತಿರುವ ಫೋಟೋಗಳು ಆರೋಪಿಯ ಅಡುಗೆ ಮನೆಯ ಫೋಟೋಗಳಾಗಿವೆ ಎಂದರೆ ಸರಿ. ಅದರಲ್ಲಿ ರಕ್ತದ ಕಲೆ ಮತ್ತು ಸಜ್ಜೆಯ ಮೇಲೆ ಸಾಮಾನುಗಳು ಕಾಣುತ್ತಿವೆ ಎಂದರೆ ಸರಿ. ಸಾಕ್ಷಿಗೆ ಗುರುತಿಸಿದ ಫೋಟೋಗಳನ್ನು ನಿಪಿ-3 ರಿಂದ 5 ಎಂದು ಗುರುತಿಸಲಾಯಿತು. ಸದರಿ ಫೋಟೋಗಳನ್ನು ಆರೋಪಿಯ ಪರ ವಕೀಲರು ಸಾಕ್ಷಿಗೆ ತೋರಿಸಿರುತ್ತಾರೆ. ಸದರಿ ಫೋಟೋಗಳಲ್ಲಿ ಕಾಣುತ್ತಿರುವ ಅಡುಗೆ ಮನೆಯ ಸಜ್ಜೆ ಮೇಲೆ ಇದ್ದ ಕೆಲವು ಭಾರವಾದ ಸಾಮಾನುಗಳು ನನ್ನ ತಂಗಿಯ ಮೇಲೆ ಬಿದ್ದು ಅವಳು ಗಾಯಗೊಂಡು ಮರಣ ಹೊಂದಿದ್ದಳು ಎಂದರೆ ಸರಿಯಲ್ಲ.

8) ಆರೋಪಿಯು ನನ್ನ ತಂಗಿಯನ್ನು ಕೊಲೆ ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನನ್ನ ತಂಗಿಯ ಹೆಸರಿನಲ್ಲಿದ್ದ ಜಮೀನನ್ನು ಕೊಡಬೇಕಾಗುತ್ತದೆ ಎಂಬ ಕಾಣದಿಂದಾಗಿ ನಾನು ಆರೋಪಿಯ ವಿರುದ್ಧ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಚಾಸಾ-17 ರವರ ಮನೆಗೆ ಹೋಗಿ ಆತನ ಮೇಲೆ ಹಲ್ಲೆ ಮಾಡಿ ಕೊಲೆ ಪ್ರಯತ್ನ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಮುಮಾ-1 ಮತ್ತು 2 ನ್ನು ಜಪ್ತು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ-13 ಮತ್ತು 14 ರವರು ನನಗೆ ಘಟನೆಯ ಬಗ್ಗೆ ಯಾವುದೇ ಮಾಹಿತಿಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.